ಸಿ.ಸಿ.974/2018

ಪಿ.ಡಬ್ಲ್ಯೂ.1 ದಿಃ 29-08-2019

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀಮತಿ ಡಿ.ಕೆ.ಆರ್ ಆರೋಪಿ ಪರ ವಕೀಲರಿಂದ

ಹಿರೀಸಾವೆಯಿಂದ ಬೆಳಿಗೆ ಹಳ್ಳಿಯಲ್ಲಿಯ ನಾನು ಕೆಲಸ ಮಾಡುತ್ತಿರುವ ಶಾಲೆಗೆ 4 ಕಿ.ಮೀ ಅಂತರವಿದೆ. ಹಿರೀಸಾವೆ ಮತ್ತು ಬೆಳಿಗೆ ಹಳ್ಳಿಯ ರಸ್ತೆಯಲ್ಲಿ ವಾಹನಗಳು ಓಡಾಡುತ್ತವೆ ಎಂದರೆ ಸರಿ. ನಮ್ಮ ಶಾಲೆಯಲ್ಲಿ ಒಟ್ಟು 4 ಜನ ಶಿಕ್ಷಕರಿದ್ದೇವೆ. ಸದರಿ 4 ಜನ ಶಿಕ್ಷಕರಲ್ಲಿ ಮೂವರು ಶಿಕ್ಷಕರು ಹಿರೀಸಾವೆಯಿಂದ ಶಾಲೆಗೆ ಬರುತ್ತಾರೆ ಮತ್ತು ಮತ್ತೊಬ್ಬರು ಚನ್ನರಾಯಪಟ್ಟಣದಿಂದ ಬರುತ್ತಾರೆ. ಹಿರೀಸಾವೆ ಮತ್ತು ಬೆಳಿಗೆ ಹಳ್ಳಿಯ ರಸ್ತೆಯಲ್ಲಿ ಸಾಕಷ್ಟು ಜನ ತಿರುಗಾಡುತ್ತಿರುತ್ತಾರೆ ಎಂದರೆ ಸರಿ. ನಾನು ಘಟನೆ ನಡೆದ ದಿನದಂದು ಶಾಲೆಗೆ ಹೋಗುತ್ತಿರುವಾಗ ನನ್ನ ಹಿಂದೆ ಬರುತ್ತಿದ್ದ ವಾಹನ ಮತ್ತು ಜನರನ್ನು ನಾನು ಗಮನಿಸಿರುವುದಿಲ್ಲ. ಆರೋಪಿಗಳು ಘಟನೆ ನಡೆದ ದಿನದಂದು ಯಾವ ಬೈಕಿನಲ್ಲಿ ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಘಟನೆ ನಡೆದ ದಿನದಂದು ಆರೋಪಿಗಳು ಕಪ್ಪು ಬಣ್ಣದ ಜರ್ಕಿನ್ ಮತ್ತು ಜೀನ್ಸ್ ಪ್ಯಾಂಟ್ ಧರಿಸಿರುತ್ತಾರೆ. ಆ ದಿನದಂದು ಇಬ್ಬರು ಆರೋಪಿಗಳಲ್ಲಿ ಯಾರು ಬೈಕ್ ಚಾಲನೆ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಇಬ್ಬರು ಆರೋಪಿಗಳಲ್ಲಿ ಯಾರು ನನ್ನ ಬಾಯಿ ಮುಚ್ಚಿರುತ್ತಾರೆ ಎಂದರೆ ಸಾಕ್ಷಿಯು ದುಂಡು ಮುಖದ ವ್ಯಕ್ತಿ ಬಾಯಿ ಮುಚ್ಚಿರುತ್ತಾರೆ ಎಂದು ನುಡಿದಿರುತ್ತಾರೆ. ನಾನು ಕೂಗಾಡಲು ಮತ್ತು ಬಿಡಿಸಿಕೊಳ್ಳಲು ಪ್ರಯತ್ನಿಸಿರುತ್ತೇನೆ. ನನ್ನ ಮಾಂಗಲ್ಯ ಸರ 46 ರಿಂದ 47 ಗ್ರಾಂ ತೂಕ ಇರುತ್ತದೆ. ಘಟನೆ ನಡೆದ ದಿನದಂದು ನಾನು ಮಾಂಗಲ್ಯ ಸರ ಮಾತ್ರ ಧರಿಸಿರುತ್ತೇನೆ 2 ವರ್ಷಗಳ ನಂತರ ನನಗೆ ಮಾಂಗಲ್ಯ ಸರವನ್ನು ಚನ್ನರಾಯಪಟ್ಟಣ ಪೋಲೀಸ್ ಠಾಣೆಯಲ್ಲಿ ನೀಡಿರುತ್ತಾರೆ. ನಾನು ಘಟನೆ ನಡೆದ ನಂತರ ನನ್ನ ಚಿಕ್ಕಪ್ಪನಾದ ಉದಯ್ ಕುಮಾರ್ ರವರಿಗೆ ಕರೆ ಮಾಡಿರುತ್ತೇನೆ.

ಘಟನೆ ಬಗ್ಗೆ ಪೋಲೀಸರಿಗೆ ತಿಳಿಸಿರುತ್ತೇನೆ. ಪೋಲೀಸರು ಘಟನಾ ಸ್ಥಳಕ್ಕೆ ಸಂಜೆ 4.30 ಗಂಟೆ ಸಮಯದಲ್ಲಿ ಬಂದಿರುತ್ತಾರೆ. ನಾನು ಪೋಲೀಸರಿಗೆ ದೂರನ್ನು ಸಂಜೆ 4 ಗಂಟೆ ಸಮಯದಲ್ಲಿ ನೀಡಿರುತ್ತೇನೆ. ಆರೋಪಿಯನ್ನು ನಾನು ಪೋಲೀಸ್ ಠಾಣೆಯಲ್ಲಿ ನೋಡಿರುತ್ತೇನೆ ಹಾಗೂ ನ್ಯಾಯಾಲಯದಲ್ಲಿ ಆರೋಪಿಯನ್ನು ಮೊದಲ ಬಾರಿಗೆ ನೋಡುತ್ತಿರುತ್ತೇನೆ ಎಂದರೆ ಸರಿಯಲ್ಲ. ಘಟನೆ ನಡೆದ 2 ವರ್ಷಗಳ ನಂತರ ಆರೋಪಿಯನ್ನು ಪೋಲೀಸರು ಠಾಣೆಯಲ್ಲಿ ತೋರಿಸಿರುತ್ತಾರೆ. ಆರೋಪಿಯನ್ನು ನಾನು ಪೋಲೀಸ್ ಠಾಣೆಯ ಕಾರಾಗೃಹದಲ್ಲಿ ನೋಡಿರುತ್ತೇನೆ. ಪೋಲೀಸ್ ಠಾಣೆಯಲ್ಲಿ ನನಗೆ ಸುಮಾರು 4-5 ಜನರನ್ನು ತೋರಿಸಿರುತ್ತೇನೆ. ಆರೋಪಿಗಳ ವಿಳಾಸವನ್ನು ತಿಳಿದುಕೊಳ್ಳಲು ನಾನು ಪ್ರಯತ್ನಿಸಿರುವುದಿಲ್ಲ. ನಾನು ಪೋಲೀಸ್ ಠಾಣೆಗೆ ಸರವನ್ನು ಪಡೆಯಲು ಹೋದ ದಿನದಂದು ನ್ಯಾಯಾಲಯದ ಮುಂದಿರುವ ಆರೋಪಿ ಪೋಲೀಸರ ಬಂಧನದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸರಿಗೆ ಮರು ಹೇಳಿಕೆಯನ್ನು ಜನವರಿ ತಿಂಗಳು 2016 ರಲ್ಲಿ ನೀಡಿರುತ್ತೇನೆ. ನನ್ನ ಸರವನ್ನು ಕಳ್ಳತನ ಮಾಡಿದ ವ್ಯಕ್ತಿ ಇಂದು ನ್ಯಾಯಾಲಯದ ಮುಂದೆ ಇರುವ ಆರೋಪಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸರ ಚಿತ್ತಾವಣೆ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಸದರಿ ಪ್ರಕರಣಕ್ಕೂ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ಮಾಂಗಲ್ಯ ಸರವನ್ನು ಖರೀದಿ ಮಾಡಿದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ.

<u>ಮರುವಿಚಾರಣೆ ಇಲ್ಲ.</u>

(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಸ.ಇ.ಎ.ಒ

3ನೇ ಅಧಿಕ ಸಿವಿಲ್ ಜಡ್ಜ್ ಮತ್ತು

ಜೆ.ಎಂ.ಎಫ್.ಸಿ